| | | | |
|---|---|---|---|
| | | ಶಿಥಿಲಗೊಂಡಿದ್ದು, ಅವುಗಳನ್ನು ದುರಸ್ಥಿಗೊಳಿಸಲಾಗದ ಸ್ಥಿತಿಯಲ್ಲಿದ್ದು, ಅವುಗಳನ್ನೂ ಸಹ ನೆಲಸಮಗೊಳಿಸಲು ಅನುಮತಿ ನೀಡುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಶಿಥಿಲಗೊಂಡಿರುವ ಶಾಲಾಕೊಠಡಿಗಳನ್ನು ನೆಲಸಮಗೊಳಿಸಲು ಅನುಮತಿ ನೀಡುವುದು ಸೂಕ್ತವೆಂದು ತಿಳಿಸಿದರು. | ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಚನ್ನರಾಯಪಟ್ಟಣ ಇವರಿಂದ ತಾಂತ್ರಿಕ ಅನುಮೋದನೆಯನ್ನು ಪಡೆದು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ನೆಲಸಮಗೊಳಿಸಲು ಸಭೆಯಲ್ಲಿ ಸರ್ವಾನುಮತದಿಂದ ಅನುಮತಿ ನೀಡಿತು. |

24/11
(ಸ್ವಾಮಿಗೌಡ)
ಅಧ್ಯಕ್ಷರು
ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ.

| | | | |
|---|---|---|---|
| | | ಔಷಧಾಗಾರ ಮತ್ತು ಶೇ. 40ರ ಅನುಪಾತದಲ್ಲಿ ಸರ್ಕಾರ ಸೂಚಿಸಿರುವ ಸಂಸ್ಥೆಗಳಿಂದ ಹಾಗೂ ಹೋಮಿಯೋಪತಿ ಔಷಧಿಗಳಿಗೆ ಮೀಸಲಿಟ್ಟ ಮೊತ್ತವನ್ನು ಶೇ.100ರಂತೆ ಸರ್ಕಾರ ಸೂಚಿಸಿರುವ ಸಂಸ್ಥೆಗಳಿಂದ ಟೆಂಡರ್ ಮುಖಾಂತರ ಖರೀದಿಸಲು ಅನುಮತಿ ನೀಡುವಂತೆ ಕೋರಿದರು. | ಔಷಧಿಗಳಿಗೆ ಮೀಸಲಿಟ್ಟ ಮೊತ್ತವನ್ನು ಶೇ.100ರಂತೆ ಸರ್ಕಾರ ಸೂಚಿಸಿರುವ ಸಂಸ್ಥೆಗಳಿಂದ ಟೆಂಡರ್ ಮುಖಾಂತರ ಖರೀದಿಸಲು ಅನುಮತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 8 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| 1 | ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಆಸ್ಪತ್ರೆ, ಹಾಸನ ಇಲ್ಲಿಗೆ ಅನಿಮಣ ಅಂಶಕಾಲಿಕ ನೌಕರರನ್ನು ನೇಮಿಸಿಕೊಳ್ಳುವ ಬಗ್ಗೆ | ಜಿಲ್ಲಾ ಆಯುಷ್ ಅಧಿಕಾರಿಗಳು ಮಾತನಾಡುತ್ತಾ, ಜಿಲ್ಲಾ ಆಯುರ್ವೇದ ಮತ್ತು ಹೋಮಿಯೋಪತಿ ಆಸ್ಪತ್ರೆ ಹಾಸನ ಈ ಸಂಸ್ಥೆಯ 35 ಹಾಸಿಗೆಗಳ ಆಸ್ಪತ್ರೆಯಾಗಿದ್ದು, ಈ ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣ ಭಾಗಶಃ ಮುಗಿದಿದ್ದು, ಹೆಚ್ಚುವರಿಯಾಗಿ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿರುತ್ತದೆ. ಈ ಕಟ್ಟಡ ನಿರ್ಮಾಣದ ನಂತರ ಆಸ್ಪತ್ರೆಯ ವಿಸ್ತೀರ್ಣ ಮತ್ತು ಕೊಠಡಿಗಳು ಕೂಡಾ ಪೂರ್ಣವಾಗಿ ಉಪಯೋಗವಾಗಲಿದ್ದು, ಇವುಗಳಿಗೆ ಶುಚಿತ್ವದ ಸಮಸ್ಯೆಯಿರುತ್ತದೆ. ಹಾಲಿ ಈ ಆಸ್ಪತ್ರೆಗೆ 10 ಗ್ರೂಪ್–ಡಿ ನೌಕರರ ಹುದ್ದೆಗಳು ಮಂಜೂರಾಗಿದ್ದು, ಇವುಗಳಲ್ಲಿ 6 ನೌಕರರು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, 04 ಹುದ್ದೆಗಳು ಖಾಲಿ ಇರುತ್ತವೆ. ಹಾಲಿ ಇರುವ ನೌಕರರುಗಳಲ್ಲಿ ನಿವೃತ್ತಿಯ ಸನಿಹದಲ್ಲಿ ಕೆಲವರಿದ್ದು, ರಾತ್ರಿ ಪಾಳಿ, ಮಧ್ಯಾಹ್ನದ ಪಾಳಿ ಹೀಗೆ ಹಲವಾರು ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಆದ್ದರಿಂದ, ಸರ್ಕಾರದ ಆದೇಶದನ್ವಯ **ಈ ಆಸ್ಪತ್ರೆಗೆ 02 ಜನ ಅನಿಮಣ ಅಂಶಕಾಲಿಕ** ನೌಕರರನ್ನು ನೇಮಿಸಿಕೊಳ್ಳಲು ಹಾಗೂ ಆಸ್ಪತ್ರೆಯ ಶುಚಿತ್ವಕ್ಕೆ ಬಳಸಿಕೊಳ್ಳಲು ಆಡಳಿತಾತ್ಮಕ ಅನುಮತಿ ನೀಡಬೇಕೆಂದು ಕೋರಿದರು ಮತ್ತು ಈ ಸಂಬಂಧ ತಗಲುವ ವೆಚ್ಚವನ್ನು ನಿಯಮಾನುಸಾರ ಸಾದಿಲ್ವಾರು ವೆಚ್ಚದಲ್ಲಿ ಲೆಕ್ಕಶೀರ್ಷಿಕೆ 2210–00–101–0–35 ಯೋಜನೇತರ ( ಭಾರತೀಯ ವೈದ್ಯಕೀಯ ಪದ್ಧತಿ ಮತ್ತು ಹೋಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತ್ರೆಗಳಿ ಸಹಾಯಾನುದಾನ) ವೇತನೇತರ ಬಾಬ್ತಿನಲ್ಲಿ ಭರಿಸಲಾಗುವುದು ಎಂದು ತಿಳಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿಗಳು ಕೋರಿರುವಂತೆ ಜಿಲಾ ಆಯುರ್ವೇದ ಮತ್ತು ಹೋಮಿಯೋಪತಿ ಆಸ್ಪತ್ರೆಯ ಶುಚಿತ್ವಕ್ಕೆ ಅಗತ್ಯವಿರುವ 02 ಜನ ಅನಿಮಣ ಅಂಶಕಾಲಿಕ ಸಿಬ್ಬಂದಿಯನ್ನು ಇಲಾಖೆಯ ನಿರ್ದೇಶನದಂತೆ, ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅನುಮತಿಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 2 | ಶಾಲಾ ಕೊಠಡಿಗಳನ್ನು ನೆಲಸಮಗೊಳಿಸಲು ಅನುಮತಿ ನೀಡುವ ಬಗ್ಗೆ. | ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಚನ್ನರಾಯಪಟ್ಟಣ ತಾಲ್ಲೂಕು ಬಾಗೂರು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತುಂಬಾ ಹಳೆಯದಾದ 3 ಕೊಠಡಿಗಳಿದ್ದು, ಅವು ಶಿಥಿಲಗೊಂಡಿದ್ದು, ಯಾವ ಸಂದರ್ಭದಲ್ಲಿಯಾದರೂ ಹಾನಿಗೊಳಗಾಗುವ ಸಂದರ್ಭವಿರುತ್ತದೆ. ಆದ್ದರಿಂದ, ಈ 3 ಕೊಠಡಿಗಳಲ್ಲಿ ತರಗತಿಗಳು ನಡೆಯದೇ ಇರುವುದರಿಂದ, ಸದರಿ ಕೊಠಡಿಗಳನ್ನು ನೆಲಸಮಗೊಳಿಸಲು ಅನುಮತಿ ನೀಡಬೇಕೆಂದು ಮನವಿಯನ್ನು ಸಲ್ಲಿಸಿರುತ್ತಾರೆ. ಹಾಗೂ ಬಾಗೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ (ಹೊಸದು) ಇಲ್ಲಿ 2 ಕೊಠಡಿಗಳು | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಚನ್ನರಾಯಪಟ್ಟಣ ತಾಲ್ಲೂಕು ಬಾಗೂರು ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ 3 ಕೊಠಡಿಗಳು ಮತ್ತು ಪ್ರೌಢಶಾಲೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ 2 ಕೊಠಡಿಗಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ |

| | | | |
|---|---|---|---|
| | | ಲೆಕ್ಕಶೀರ್ಷಿಕೆಗಳಡಿಯಲ್ಲಿ ವೇತನೇತರ ಮೊತ್ತದಲ್ಲಿ ನಿಗದಿಯಾಗಿರುವ ಮೊತದಲ್ಲಿ ಉಳಿಕೆಯಾಗುವ ಮೊತ್ತದಲ್ಲಿ ಟೆಂಡರ್ ಆಧಾರದ ಮೇಲೆ ಖರೀದಿಸಲು ಅನುಮತಿ ನೀಡಬೇಕೆಂದು ಕೋರಿದರು.<br>1. 2210-00-101-0-35 ಯೋಜನೇತರ (ಭಾರತೀಯ ವೈದ್ಯಕೀಯ ಪದ್ಧತಿ ಮತ್ತು ಹೋಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯನುದಾನ - ಅಡಿಯಲ್ಲಿ ನಿಗದಿಯಾಗಿರುವ ರೂ.8.32ಲಕ್ಷಗಳಲ್ಲಿ ರೂ.6.24ಲಕ್ಷ ಬಿಡುಗಡೆಯಾಗಿದ್ದು, ವರ್ಷಾಂತ್ಯದಲ್ಲಿ ರೂ.5.00ಲಕ್ಷಗಳು ಉಳಿಕೆಯಾಗುತ್ತವೆ.<br>2. 2210-00-101-0-29 ಯೋಜನೇತರ (ಆಯುಷ್ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳನ್ನು ತೆರೆಯುವುದು ಮತ್ತು ನಿರ್ವಹಣೆ - ಅಡಿಯಲ್ಲಿ ನಿಗದಿಯಾಗಿರುವ ರೂ.27.55ಲಕ್ಷಗಳಲ್ಲಿ ರೂ.20.67ಲಕ್ಷ ಬಿಡುಗಡೆಯಾಗಿದ್ದು, ವರ್ಷಾಂತ್ಯದಲ್ಲಿ ರೂ.18.00ಲಕ್ಷಗಳು ಉಳಿಕೆಯಾಗುತ್ತವೆ.<br>3. 2210-00-101-0-41 ಯೋಜನೇತರ (ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ - ಅಡಿಯಲ್ಲಿ ನಿಗದಿಯಾಗಿರುವ ರೂ.3.92ಲಕ್ಷಗಳಲ್ಲಿ ರೂ.2.94ಲಕ್ಷ ಬಿಡುಗಡೆಯಾಗಿದ್ದು, ವರ್ಷಾಂತ್ಯದಲ್ಲಿ ರೂ.2.50ಲಕ್ಷಗಳು ಉಳಿಕೆಯಾಗುತ್ತವೆ.<br>ಹೀಗೆ ಮೇಲ್ಕಂಡ ಮೂರು ಲೆಕ್ಕಶೀರ್ಷಿಕೆಗಳಲ್ಲಿ ಉಳಿಕೆಯಾಗುವ ಒಟ್ಟು ರೂ.25.50ಲಕ್ಷಗಳಲ್ಲಿ ಈ-ಪ್ರೊಕ್ಯೂರ್‌ಮೆಂಟ್ ಮೂಲಕ ಅವಶ್ಯ ಆಸ್ಪತ್ರೆ/ಪರಿಕರಗಳು/ಪೀಠೋಪಕರಣಗಳು/ ಸಾಧನ ಸಾಮಗ್ರಿಗಳನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿದರು. | ಲೆಕ್ಕಶೀರ್ಷಿಕೆಗಳಡಿಯಲ್ಲಿ ವೇತನೇತರ ಮೊತ್ತದಲ್ಲಿ ನಿಗದಿಯಾಗಿರುವ ಮೊತ್ತದಲ್ಲಿ ಉಳಿಕೆಯಾಗುವ ರೂ.25.50ಲಕ್ಷಗಳ (ರೂಪಾಯಿ ಇಪ್ಪತ್ತೈದು ಲಕ್ಷದ ಐವತ್ತು ಸಾವಿರ ಮಾತ್ರ)ಗಳ ಮೊತ್ತದಲ್ಲಿ ಈ ಪ್ರೊಕ್ಯೂರ್‌ಮೆಂಟರ್ ಮೂಲಕ ನಿಯಮಾನುಸಾರ ಖರೀದಿಸಲು ಅನುಮತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 7 | 2012-13ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಆಯುಷ್ ಇಲಾಖೆಯ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಆಯುರ್ವೇದ/ಯುನಾನಿ/ ಹೋಮಿಯೋಪತಿ ಔಷಧಿಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(8) ಔಷಧ10/2012-13 ದಿನಾಂಕ: 19-11-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿಗಳು ಮಾತನಾಡುತ್ತಾ, 2012-13ನೇ ಸಾಲಿನಲ್ಲಿ ಆಯುರ್ವೇದ/ಯುನಾನಿ/ಹೋಮಿಯೋಪತಿ ಔಷಧಿಗಳನ್ನು ಖರೀದಿಸಲು ಲೆಕ್ಕಶೀರ್ಷಿಕೆ 2210-00-101-0-37 ( ಯೋಜನೇತರ) ( ಭಾ.ವೈ ಪದ್ಧತಿಗೆ ರಾಸಾಯನಿಕ ವಸ್ತುಗಳ ಖರೀದಿ ) ಅಡಿಯಲ್ಲಿ ರೂ.32.60ಲಕ್ಷಗಳು ನಿಗದಿಯಾಗಿದ್ದು, ಇದುವರೆಗೆ ರೂ.24.45ಲಕ್ಷಗಳು ಬಿಡುಗಡೆಯಾಗಿದ್ದು, ಪೂರ್ಣ ಅನುದಾನ ಬಿಡುಗಡೆಯಾದ ನಂತರ ಜಿಲ್ಲೆಯ 56 ಆಯುರ್ವೇದ, 05 ಯುನಾನಿ ಮತ್ತು 02 ಹೋಮಿಯೋಪತಿ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಔಷಧಿ ಖರೀದಿಸಿ ಸರಬರಾಜು ಮಾಡಬೇಕಾಗಿದ್ದು, ಇದಕ್ಕೆ ನಿಗದಿಪಡಿಸಿರುವ ಮೊತ್ತದಲ್ಲಿ ಶೇ.60ರ ಅನುಪಾತದಲ್ಲಿ ಆಯುರ್ವೇದ ಮತ್ತು ಯುನಾನಿ ಕ್ರಮವಾಗಿ ಸರ್ಕಾರಿ ಕೇಂದ್ರೀಯ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿಗಳು ಕೋರಿರುವಂತೆ 2012-13ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-00-101-0-37 ( ಯೋಜನೇತರ) ( ಭಾ.ವೈ ಪದ್ಧತಿಗೆ ರಾಸಾಯನಿಕ ವಸ್ತುಗಳ ಖರೀದಿ) ಅಡಿಯಲ್ಲಿ ಆಯುರ್ವೇದ/ಯುನಾನಿ/ ಹೋಮಿಯೋ ಪತಿ ಔಷಧಿಗಳನ್ನು ಖರೀದಿಸಲು ನಿಗದಿಪಡಿಸಿ ರುವ ರೂ.32.60ಲಕ್ಷಗಳಲ್ಲಿ ಶೇ.60ರ ಅನುಪಾತದಲ್ಲಿ ಆಯುರ್ವೇದ ಮತ್ತು ಯುನಾನಿ ಕ್ರಮವಾಗಿ ಸರ್ಕಾರಿ ಕೇಂದ್ರೀಯ ಔಷಧಾಗಾರ ಮತ್ತು ಶೇ. 40ರ ಅನುಪಾತದಲ್ಲಿ ಸರ್ಕಾರ ಸೂಚಿಸಿರುವ ಸಂಸ್ಥೆಗಳಿಂದ ಹಾಗೂ ಹೋಮಿಯೋಪತಿ |

| | | | |
|---|---|---|---|
| | | | ಅನುದಾನ ರೂ.2.50ಲಕ್ಷಗಳಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ನೀರಿನ ಸಂಗ್ರಹಣೇಗೆ ಸಂಪ್ ಟ್ಯಾಂಕ್ ನಿರ್ಮಿಸಿ, ಸಾಲಗಾಮೆ ರಸ್ತೆಯಿಂದ ಪೈಪ್‌ಲೈನ್ ಸಂಪರ್ಕ ಕಲ್ಪಿಸುವ ಕಾಮಗಾರಿನ್ನು ಅನುಷ್ಠಾನ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 6 | ಆಯುಷ್ ಇಲಾಖೆಯ ಅಧೀನದ ಆಯುರ್ವೇದ ಮತ್ತು ಯುನಾನಿ ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳಿಗೆ 2012-13ನೇ ಸಾಲಿನಲ್ಲಿ ಸರಬರಾಜು ಆಗುವ ಬಿಲ್ಲುಗಳನ್ನು ಅನುಮೋದಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(8)ಔಷಧ10/2012-13 ದಿನಾಂಕ: 09-11-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>1. ಜಿಲ್ಲಾ ಆಯುಷ್ ಅಧಿಕಾರಿಗಳು ಮಾತನಾಡುತ್ತಾ, 2011-12ನೇ ಸಾಲಿಗೆ ರಾಜ್ಯ ಮಟ್ಟದಲ್ಲಿ ಟೆಂಡರ್ ಅಂತಿಮಗೊಳ್ಳದಿರುವ ಪ್ರಯುಕ್ತ ಔಷಧಿಗಳು ಸರಬರಾಜು ಪೂರ್ಣ ಪ್ರಮಾಣದಲ್ಲಿ ಅಗಿರುವುದಿಲ್ಲ. ಸರ್ಕಾರಿ ಕೇಂದ್ರೀಯ ಔಷಧಾಗಾರ, ಬೆಂಗಳೂರು ಇವರಿಂದ ಮಾತ್ರ ಸರಬರಾಜಾಗಿದ್ದು, ಇಲ್ಲಿನ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಔಷಧಿಗಳ ಕೊರತೆ ಇರುತ್ತದೆ. ಈಗಾಗಲೇ ಇಲಾಖೆಯು ಟೆಂಡರ್ ಪ್ರಕ್ರಿಯೆಯನ್ನು ಕೆ.ಡಿ.ಎಲ್ ಮತ್ತು ಡಬ್ಲ್ಯೂಹೆಚ್‌ಎಸ್ ಇವರ ಮುಖಾಂತರ ನಡೆಸಿ ಅಂತಿಮಗೊಳಿಸಿದ್ದು, ಔಷಧಿಗಳ ಕೊರತೆಯನ್ನು ಮನಗಂಡು ಔಷಧಿಯನ್ನು ಸರಬರಾಜು ಮಾಡುತ್ತಿರುತ್ತಾರೆ. ಈ ರೀತಿ ಅಯ್ಕೆಗೊಂಡ ಸಂಸ್ಥೆಗಳು ಮಧ್ಯಪ್ರದೇಶ ಮತ್ತು ಕೇರಳ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿದ್ದು, ಇವುಗಳಿಂದ ಔಷಧಿಗಳನ್ನು ಇಲಾಖಾ ಬೇಡಿಕೆಗಳಿಗನುಸಾರವಾಗಿ ಕೆ.ಡಿ.ಎಲ್ ಮತ್ತು ಡಬ್ಲ್ಯೂಹೆಚ್‌ಎಸ್ ರವರು ಇಲ್ಲಿಯವರೆಗೆ ರೂ.9,18,793/-ಗಳ ಔಷಧಿಗಳನ್ನು ಸರಬರಾಜು ಮಾಡಿದ್ದು, ಸದರಿ ಬಾಬ್ತನ್ನು ಕೆ.ಡಿ.ಲ್ ಮತ್ತು ಡಬ್ಲ್ಯೂಹೆಚ್‌ಎಸ್ ರವರಿಗೆ ಪಾವತಿಸ ಅನುಮೋದನೆಯನ್ನು ನೀಡಬೇಕೆಂದು ಕೋರಿದರು.<br>2. 2012-13ನೇ ಸಾಲಿಗೆ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾಸನ ಇಲ್ಲಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಲೆಕ್ಕಶೀರ್ಷಿಕೆ 2210-00-101-0-35 ಯೋಜನೆ (ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಜಿಲ್ಲಾ ಆಸ್ಪತ್ರೆಗಳಿಗೆ ಸಹಾಯಾನುದಾನ ) ಅಡಿ ವೇತನೇತರ ಬಾಬ್ತಿನಡಿ ನಿಗದಿಯಾಗಿರುವ ರೂ.1.00ಲಕ್ಷಗಳ ಮೊತ್ತದಲ್ಲಿ ದರಪಟ್ಟಿ ಕರೆದು ನಿಯಮಾನುಸಾರ ಖರೀದಿ ಮಾಡಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವಂತೆ ಕೋರಿದರು.<br>3. 2012-13ನೇ ಸಾಲಿಗೆ ಜಿಲ್ಲೆಯ ಆಯುಷ್ ಆಸ್ಪತ್ರೆಗಳಿಗೆ 2012-13ನೇ ಸಾಲಿಗೆ ಆಸ್ಪತ್ರೆ ಪರಿಕರಗಳು/ಪೀಠೋಪಕರಣಗಳು/ ಸಾಧನ ಸಾಮಗ್ರಿಗಳು ಅವಶ್ಯವಿದ್ದು, ಕೆಳಕಂಡ | ಸಭೆಯಲ್ಲಿ ಆಯುಷ್ ಇಲಾಖೆಯ ಪ್ರಸ್ತಾವನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿಗಳು ಕೋರಿರುವಂತೆ ಅನುಮೋದನೆಯನ್ನು ನೀಡಲು ತೀರ್ಮಾನಿಸಲಾಯಿತು.<br>1. ಜಿಲ್ಲೆಯ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ಅವಶ್ಯ ಔಷಧಿಗಳನ್ನು ಸರಬರಾಜು ಮಾಡಿದ ಬಾಬ್ತನ್ನು ಕೆ.ಡಿ.ಎಲ್ ಮತ್ತು ಡಬ್ಲ್ಯೂಹೆಚ್‌ಎಸ್ ಇವರಿಗೆ ನಿಯಮಾನುಸಾರ ಪಾವತಿಸಲು ಸರ್ವಾನುಮತದಿಂದ ಅನುಮೋದಿಸಲಾಯಿತು,<br>2. 2012-13ನೇ ಸಾಲಿಗೆ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾಸನ ಇಲ್ಲಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಲೆಕ್ಕಶೀರ್ಷಿಕೆ 2210-00-101-0-35 ಯೋಜನೆ (ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಜಿಲ್ಲಾ ಆಸ್ಪತ್ರೆಗಳಿಗೆ ಸಹಾಯಾನುದಾನ ) ಅಡಿ ವೇತನೇತರ ಬಾಬ್ತಿನಡಿ ನಿಗದಿಯಾಗಿರುವ ರೂ.1.00ಲಕ್ಷಗಳ ಮೊತ್ತದಲ್ಲಿ ದರಪಟ್ಟಿ ಕರೆದು ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡಲಾಯಿತು.<br>3. 2012-13ನೇ ಸಾಲಿಗೆ ಜಿಲ್ಲೆಯ ಆಯುಷ್ ಆಸ್ಪತ್ರೆಗಳಿಗೆ 2012-13ನೇ ಸಾಲಿಗೆ ಆಸ್ಪತ್ರೆ ಪರಿಕರಗಳು/ಪೀಠೋಪಕರಣಗಳು/ ಸಾಧನ ಸಾಮಗ್ರಿಗಳು ಅವಶ್ಯವಿದ್ದು, ಕೆಳಕಂಡ |

| | | | |
|---|---|---|---|
| | | | ಸೇವಾ ಮಂಡಳಿಗಳಿಗೆ ಕ್ರೀಡಾ ಸಾಮಗ್ರಿಗಳ ಖರೀದಿಗಾಗಿ ನಿಗದಿಪಡಿಸಿರುವ ರೂ.20000/-ಗಳಲ್ಲಿ ದೈನಂದಿನ ತರಬೇತಿಗೆ ಬೇಕಾದ ಕ್ರೀಡಾ ಸಲಕರಣೆಗಳನ್ನು ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>6. 2205-0-104-0-01-05 ಪೈಕಾ ಯೋಜನೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಕ್ರೀಡಾ ಕೇಂದ್ರಗಳನ್ನು ನಡೆಸಲು ಭಾರತ ಸರ್ಕಾರದ ನಿಯಮದಂತೆ ನೀಡಬೇಕಾದ ತಲಾ ರೂ.10000/-ಗಳ ಕ್ರೀಡಾ ಸಲಕರಣೆಗಳನ್ನು ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>7. 2205-00-104-0-26 ಕ್ರೀಡಾ ಕೂಟ ಮತ್ತು ರ್‍ಯಾಲಿಗಳ ಸಂಘಟನೆ ಮತ್ತು ದಿನಭತ್ಯೆ ಯೋಜನೆಯಡಿ ಒದಗಿಸಿರುವ ಅನುದಾನದಲ್ಲಿ ಎಲ್ಲಾ ಕಾರ್ಯಕ್ರಮಗಳು ಮುಗಿದ ನಂತರ ಉಳಿಯುವ ಹಣದಲ್ಲಿ ಇಲಾಖೆಯ ತರಬೇತುದಾರರು ದೈನಂದಿನ ತರಬೇತಿ ನೀಡಲು ಬೇಕಾದ ಕ್ರೀಡಾ ಸಲಕರಣೆಗಳನ್ನು ಈ ಪ್ರೊಕ್ಯೂರ್‌ಮೆಂಟ್ ಮೂಲಕ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>8. 2205-00-104-0-28 ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ ಯೋಜನೆಯ ಅಡಿಯಲ್ಲಿ ನಿಗದಿಪಡಿಸಿರುವ ರೂ.5.00ಲಕ್ಷಗಳಲ್ಲಿ ಅರಸೀಕೆರೆ ತಾಲ್ಲೂಕು ಕ್ರೀಡಾಂಗಣಕ್ಕೆ ರೂ.1.00ಲಕ್ಷ ಆಲೂರು ತಾಲ್ಲೂಕು ಕ್ರೀಡಾಂಗಣಕ್ಕೆ ರೂ.50000/- , ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲ್ಲೂಕು ಕ್ರೀಡಾಂಗಣಗಳಿಗೆ ತಲಾ ರೂ.50000/-ಗಳನ್ನು ನಿರ್ವಹಣೆ ಮಾಡಲು ಅಂದರೆ, ವಿದ್ಯುತ್ ಬಿಲ್, ಸೆಕ್ಯೂರಿಟಿ ವೆಚ್ಚ ಇತ್ಯಾದಿಗಳಿಗಾಗಿ ವಿನಿಯೋಗಿಸಲು ಮತ್ತು ಉಳಿಕೆ |

| | | | |
|---|---|---|---|
| | | ಪ್ರಕ್ರಿಯೆ ಅಂತಿಮಗೊಂಡಿರುವುದಿಲ್ಲ. ಆದ್ದರಿಂದ, ಜಿಲ್ಲಾ ಮಟ್ಟದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಕರೆದು ಕ್ರೀಡಾ ಸಲಕರಣೆಗಳನ್ನು ಖರೀದಿಸಿ ಶಾಲೆಗಳಿಗೆ ನೀಡಲು ಅನುಮತಿಯನ್ನು ನೀಡಬೇಕೆಂದು ಕೋರಿದರು.<br>ಸಭೆಯಲ್ಲಿ ಈ ಬಗ್ಗೆ ವಿವರವಾಗಿ ಚರ್ಚಿಸಲಾಯಿತು ಮತ್ತು ರಾಜ್ಯಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡು ಕ್ರೀಡಾ ಸಲಕರಣೆಗಳನ್ನು ಸರಬರಾಜು ಮಾಡುವುದು ವಿಳಂಬವಾಗುವ ಸಂಭವವಿದ್ದಲ್ಲಿ ಜಿಲ್ಲಾ ಮಟ್ಟದಲ್ಲಿಯೇ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕ್ರೀಡಾ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸಿ ಶಾಲೆಗಳಿಗೆ ವಿತರಣೆ ಮಾಡಲು ತೀರ್ಮಾನಿಸಲಾಯಿತು. ಸಹಾಯಕ ನಿರ್ದೇಶಕರ ಕಛೇರಿಗೆ ಅವಶ್ಯವಿರುವ ಜೆರಾಕ್ಸ್ ಯಂತ್ರವನ್ನು ಡಿ.ಜಿ.ಎಸ್.ಅಂಡ್ ಡಿ ದರದನ್ವಯ ನಿಯಮಾನುಸಾರ ಖರೀದಿಸಲು ಒಪ್ಪಿಗೆಯನ್ನು ನೀಡಲಾಯಿತು.<br>2011-12ನೇ ಸಾಲಿನಲ್ಲಿ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಗಳ ಇಲಾಖೆಯ ವತಿಯಿಂದ ಪೈಕಾ ಯೋಜನೆಯಡಿಯಲ್ಲಿ ಅನುಷ್ಠಾನ ಮಾಡಿರುವ ಶಾಲಾ ಮೈದಾನಗಳ ಕಾಮಗಾರಿಗಳ ಪ್ರಗತಿ ವರದಿಯನ್ನು ಸಹಾಯಕ ನಿರ್ದೇಶಕರಿಗೆ ನೀಡಲು ಕ್ರಮ ವಹಿಸುವಂತೆ ಉಪ ನಿರ್ದೇಶಕರಿಗೆ ತಿಳಿಸಿದರು. | ಜಿಲ್ಲಾ ಮಟ್ಟದಲ್ಲಿಯೇ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕ್ರೀಡಾ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸಿ ಶಾಲೆಗಳಿಗೆ ವಿತರಣೆ ಮಾಡಲು ತೀರ್ಮಾನಿಸಲಾಯಿತು.<br>1.2205-00-104-0-31 ಗ್ರಾಮೀಣ ಕ್ರೀಡಾ ಕೇಂದ್ರಗಳು (ಯೋಜನೆ) ಯಡಿಯಲ್ಲಿ ನಿಗದಿಪಡಿಸಿರುವ ರೂ.5.00ಲಕ್ಷಗಳಲ್ಲಿ ಪ್ರತಿ ಶಿಕ್ಷಣ ಸಂಸ್ಥೆಗೆ ತಲಾ ರೂ.12,500.00ರಂತೆ 40 ಶಿಕ್ಷಣ ಸಂಸ್ಥೆಗಳಿಗೆ ಕ್ರೀಡಾ ಸಲಕರಣೆಗಳನ್ನು ನೀಡಲು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.<br>2. 2205-00-104-0-32 ಕ್ರೀಡೆ ಮತ್ತು ಪಂದ್ಯಗಳು ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ (ಯೋಜನೇತರ)ದಡಿಯಲ್ಲಿ ನಿಗದಿಪಡಿಸಿರುವ ರೂ.1.47ಲಕ್ಷಗಳ ಅನುದಾನದಲ್ಲಿ ರಊ.6300/-ರಂತೆ 23 ಶಾಲೆಗಳಿಗೆ ಕ್ರೀಡಾ ಸಲಕರಣೆಗಳನ್ನು ನೀಡಲು ಸರ್ವಾನುಮತದಿಂದ **ಅನುಮೋದನೆ ನೀಡಲಾಯಿತು.**<br>3. 2205-00-104-0-33 ಕ್ರೀಡಾ ಸಾಮಗ್ರಿ ಕೊಳ್ಳಲು, ಕ್ರೀಡಾ ಬಯಲುಗಳನ್ನು ಅಭಿವೃದ್ಧಿ ಪಡಿಸಲು ವಿದ್ಯಾ ಹಾಗೂ ಇತರೆ ಸಂಸ್ಥೆಗಳಿಗೆ ಸಹಾಯ (ಯೋಜನೇತರ) ದಡಿಯಲ್ಲಿ ನಿಗದಿಪಡಿಸಿರುವ ರೂ.1.05ಲಕ್ಷಗಳಲ್ಲಿ 17 ಶಿಕ್ಷಣ ಸಂಸ್ಥೆಗಳಿಗೆ ತಲಾ ರೂ.6300/-ರಂತೆ ಕ್ರೀಡಾ ಸಲಕರಣೆಗಳನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.<br>4.2205-00-104-0-35 ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗೆ ಪ್ರೋತ್ಸಾಹ ಅಡಿ ನಿಗದಿಪಡಿಸಿರುವ ರೂ.46000/-ಗಳಲ್ಲಿ ಸಹಾಯಕ ನಿರ್ದೇಶಕರ ಕಚೇರಿಗೆ ಅವಶ್ಯವಿರುವ ಜೆರಾಕ್ಸ್ ಯಂತ್ರವನ್ನು ಡಿ.ಜಿ.ಎಸ್.ಅಂಡ್ ಡಿ ದರದನ್ವಯ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>5. 2205-00-104-0-36 ಜಿಲ್ಲಾ /ವಿಭಾಗೀಯ ಯುವಜನ |

| | | | |
|---|---|---|---|
| | | ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡುತ್ತಾ, ಯು.ಪಿ.ಎಸ್ ಅನ್ನು ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ ಖರೀದಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. | ಭಾಗಗಳನ್ನು ಲೆಕ್ಕಶೀರ್ಷಿಕೆ 2210-00-106-0-01 ರಲ್ಲಿನ ವೇತನೇತರ ಬಾಬ್ತಿನಲ್ಲಿ ಲಭ್ಯವಿರುವ ಅನುದಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕ ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |
| 4 | ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಸಾಕ್ಷರತಾ ಸಮಿತಿಯ ಜಿಲ್ಲಾ ಅನುದಾನದಲ್ಲಿ ವೃತ್ತಿ ಕೌಶಲ್ಯ ತರಬೇತಿಯನ್ನು ಅನುಷ್ಠಾನಗೊಳಿಸಲು ಅನುಮೋದಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಕಾ/ಅಭಿ(8)ಔಷಧ10/2012-13 ದಿನಾಂಕ: 09-11-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಹಾಸನ ಇವರು ಮಾತನಾಡುತ್ತಾ, 2012-13ನೇ ಸಾಲಿಗೆ ಜಿಲ್ಲಾ ಅನುದಾನದಲ್ಲಿ ಮೀಸಲಿರುವ ರೂ.6.40ಲಕ್ಷಗಳ ಅನುದಾನದಲ್ಲಿ ಡಾ: ನಂಜುಂಡಪ್ಪ ವರದಿ ಅನ್ವಯ 5 ಹಿಂದುಳಿದ ತಾಲ್ಲೂಕುಗಳಲ್ಲಿ ನವಸಾಕ್ಷರರಿಗೆ ಡ್ರೆಸ್ ಮೇಕಿಂಗ್ ವೃತ್ತಿ ತರಬೇತಿಯನ್ನು ಪ್ರಾರಂಭಿಸಲು ಅನುಮೋದನೆಯನ್ನು ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಕೋರಿರುವಂತೆ 2012-13ನೇ ಸಾಲಿಗೆ ಜಿಲ್ಲಾ ಅನುದಾನದಲ್ಲಿ ಮೀಸಲಿರುವ ರೂ.6.40ಲಕ್ಷಗಳ ಅನುದಾನದಲ್ಲಿ ಡಾ: ನಂಜುಂಡಪ್ಪ ವರದಿ ಅನ್ವಯ 5 ಹಿಂದುಳಿದ ತಾಲ್ಲೂಕುಗಳಲ್ಲಿ ನವಸಾಕ್ಷರರಿಗೆ ಡ್ರೆಸ್ ಮೇಕಿಂಗ್ ವೃತ್ತಿ ತರಬೇತಿಯನ್ನು ಪ್ರಾರಂಭಿಸಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 5 | ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಲ್ಲಿ 2012-13ನೇ ಸಾಲಿಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಒದಗಿಸಿರುವ ಅನುದಾನವನ್ನು ವೆಚ್ಚ ಮಾಡಲು ಅನುಮೋದನೆ ನೀಡುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಕಾ/ಅಭಿ(8)ಔಷಧ10/2012-13 ದಿನಾಂಕ: 09-11-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2012-13ನೇ ಸಾಲಿಗೆ ಯೋಜನೆ ಮತ್ತು ಯೋಜನೇತರದಡಿಯಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಒದಗಿಸಿರುವ ಅನುದಾನವನ್ನು ವೆಚ್ಚ ಮಾಡಲು ಅನುಮೋದನೆ ನೀಡಲು ಮತ್ತು ಇದಕ್ಕಾಗಿ ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡಬೇಕೆಂದು ಕೋರಿದರು.<br>ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡುತ್ತಾ, ಶಾಲೆಗಳಿಗೆ ನೀಡುವ ಕ್ರೀಡಾ ಸಲಕರಣೆಗಳ ಗುಣಮಟ್ಟದ ಬಗ್ಗೆ ದೃಢೀಕರಿಸಿಕೊಂಡು ನೀಡಲು ಕ್ರಮ ವಹಿಸಬೇಕೆಂದು ತಿಳಿಸಿದರು.<br>ಸಹಾಯಕ ನಿರ್ದೇಶಕರು ಮಾತನಾಡುತ್ತಾ, ಕ್ರೀಡಾ ಸಲಕರಣೆಗಳನ್ನು ರಾಜ್ಯಮಟ್ಟದಲ್ಲಿ ಟೆಂಡರ್ ಕರೆದು ಜಿಲ್ಲೆಗೆ ಸರಬರಾಜು ಮಾಡಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಇನ್ನೂ ಟೆಂಡರ್ | ಸಭೆಯಲ್ಲಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಪ್ರಸ್ತಾವನೆಗಳ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಹಾಸನ ಇವರು ಕೋರಿರುವಂತೆ 2012-13ನೇ ಸಾಲಿಗೆ ಯೋಜನೆ ಮತ್ತು ಯೋಜನೇತರದಡಿ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ನಿಗದಿಪಡಿಸಿರುವ ಅನುದಾನದಲ್ಲಿ ನಿಯಮಾನುಸಾರ ವೆಚ್ಚ ಮಾಡಲು ಮತ್ತು ಟೆಂಡರ್ ಕರೆಯಲು ಅನುಮೋದನೆ ನೀಡಲಾಯಿತು.<br>ಕ್ರೀಡಾ ಸಲಕರಣೆಗಳನ್ನು ಖರೀದಿಸುವ ಬಗ್ಗೆ ವಿವರವಾಗಿ ಚರ್ಚಿಸಲಾಯಿತು ಮತ್ತು ರಾಜ್ಯಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡು ಕ್ರೀಡಾ ಸಲಕರಣೆಗಳನ್ನು ಸರಬರಾಜು ಮಾಡುವುದು ವಿಳಂಬವಾಗುವ ಸಂಭವವಿದ್ದಲ್ಲಿ |

| | | | |
|---|---|---|---|
| 2 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 2012–13ನೇ ಸಾಲಿಗೆ ಆಸ್ಪತ್ರೆಗಳ ಸಲಕರಣೆಗಳ ದುರಸ್ಥಿ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಎಕ್ಸರೇ ಯಂತ್ರದ ಸೌಲಭ್ಯ ಒದಗಿಸಲು ಅನುಮೋದನೆ ನೀಡುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಮಕಾ/ಅಭಿ(8)ಔಷಧ10/2012–13 ದಿನಾಂಕ: 09–11–2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, 2012–13ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧೀನ ಆಸ್ಪತ್ರೆಗಳಿಗೆ ಸಲಕರಣೆಗಳ ದುರಸ್ಥಿಗಾಗಿ ರೂ.8.00ಲಕ್ಷಗಳ ಅನುದಾನ ನಿಗದಿಯಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲಕರಣೆಗಳ ದುರಸ್ಥಿಗೆ ಕ್ರಮ ವಹಿಸಲಾಗುವುದು ಎಂದು ಸಭೆಗೆ ವಿವರ ನೀಡಿದರು. ಮತ್ತು ಪ್ರಸಕ್ತ ಸಾಲಿನಲ್ಲಿ 2 ಎಕ್ಸರೇ ಯಂತ್ರಗಳಿಗೆ ರೂ.12.00ಲಕ್ಷಗಳು ನಿಗದಿಯಾಗಿದ್ದು, ಅದರಲ್ಲಿ ಚನ್ನರಾಯಪಟ್ಟಣ ತಾಲ್ಲೂಕು ಉದಯಪುರ ಮತ್ತು ಬೇಲೂರು ತಾಲ್ಲೂಕು ಅರೇಹಳ್ಳಿ ಆಸ್ಪತ್ರೆಗಳಿಗೆ ಎಕ್ಸರೇ ಯಂತ್ರಗಳನ್ನು ಅಳವಡಿಸಲಾಗುವುದು ಮತ್ತು ಎಕ್ಸರೇ ಯಂತ್ರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಖರೀದಿಸಲು ಕ್ರಮ ವಹಿಸಲಾಗಿದೆ ಎಂದು ಸಭೆಗೆ ವಿವರ ನೀಡುತ್ತಾ, ಅನುಮೋದನೆಯನ್ನು ನೀಡುವಂತೆ ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಕೋರಿರುವಂತೆ 2012–13ನೇ ಸಾಲಿಗೆ ಆಸ್ಪತ್ರೆಗಳ ಸಲಕರಣೆಗಳನ್ನು ದುರಸ್ಥಿಪಡಿಸಲು ನಿಗದಿಪಡಿಸಿರುವ ರೂ.8.00ಲಕ್ಷ (ರೂಪಾಯಿ ಎಂಟು ಲಕ್ಷಗಳು ಮಾತ್ರ)ಗಳಲ್ಲಿ ಅಧೀನ ಆಸ್ಪತ್ರೆಗಳಿಂದ ಸಲಕರಣೆಗಳ ದುರಸ್ಥಿ ಬಗ್ಗೆ ಬೇಡಿಕೆಯನ್ನು ಪಡೆದು, ಈ ಟೆಂಡರ್ ಕರೆದು ನಿಯಮಾನುಸಾರ ಆಸ್ಪತ್ರೆಗಳ ಸಲಕರಣೆಗಳನ್ನು ದುರಸ್ಥಿಪಡಿಸಲು ಮತ್ತು ಎಕ್ಸರೇ ಯಂತ್ರಗಳ ಖರೀದಿಗೆ ನಿಗದಿಪಡಿಸಿರುವ ರೂ.12.00ಲಕ್ಷ (ರೂಪಾಯಿ ಹನ್ನೆರಡು ಲಕ್ಷ ಮಾತ್ರ)ಗಳಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| 3 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 2012–13ನೇ ಸಾಲಿಗೆ ಯು.ಪಿ.ಎಸ್ ಖರೀದಿಸಲು ಮತ್ತು ಅಧೀನ ಆಸ್ಪತ್ರೆಗಳಿಗೆ ವೈದ್ಯಕೀಯ ಸಲಕರಣೆ ಬಿಡಿ ಭಾಗಗಳ ಖರೀದಿಗೆ ದರಪಟ್ಟಿ ಕರೆಯಲು ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಕಾ/ಅಭಿ(8) ಔಷಧ10/2012–13 ದಿನಾಂಕ: 19–11–2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಜಿಲ್ಲಾ ಕಛೇರಿಯಲ್ಲಿ ವೈದ್ಯಾಧಿಕಾರಿಗಳ ತರಬೇತಿ ಮತ್ತು ಸಭೆಯನ್ನು ನಡೆಸುವ ಎರಡನೇ ಮಹಡಿಗೆ ವಿದ್ಯುತ್ ತೊಂದರೆ ಆದಾಗ ವಿದ್ಯುತ್‌ಅನ್ನು ಪಡೆಯಲು 5ಕೆ.ವಿ ಯು.ಪಿ.ಎಸ್ ಬೇಕಾಗಿರುತ್ತದೆ. ಆದ್ದರಿಂದ, ದರಪಟ್ಟಿಯನ್ನು ಕರೆದು 5ಕೆ.ವಿ ಯು.ಪಿ.ಎಸ್ ಅನ್ನು ಖರೀದಿಸಲು ಅನುಮೋದನೆ ನೀಡಬೇಕೆಂದು ಕೋರಿದರು.<br>ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಆಸ್ಪತ್ರೆಗಳಲ್ಲಿ ಇರುವ ಆಟೋಕ್ಲೇವ್, ಸ್ಟೆರಿಲೈಜರ್, ಮೈಕ್ರೋಸ್ಕೋಪ್, ಓ.ಟಿ.ಲೈಟ್, ಕ್ಷ–ಕಿರಣ ಯಂತ್ರ ಹಾಗೂ ಇತರೆ ಆಸ್ಪತ್ರೆಯ ವೈದ್ಯಕೀಯ ಸಲಕರಣೆಗಳು ಕೆಟ್ಟು ಹೋದಾಗ ಈ ಕಛೇರಿಯ ಉಪಕರಣದ ತ್ರಂತ್ರಜ್ಞರು ಅಧೀನ ಆಸ್ಪತ್ರೆಗೆ ಹೋಗಿ ದುರಸ್ಥಿಪಡಿಸಲು ಬೇಕಾಗುವ ಬಿಡಿಭಾಗಳನ್ನು ಲೆಕ್ಕಶೀರ್ಷಿಕೆ 2210–00–106–0–01 ರಲ್ಲಿನ ವೇತನೇತರ ಬಾಬ್ತಿನಲ್ಲಿ ಲಭ್ಯವಿರುವ ಅನುದಾನದಲ್ಲಿ ದರಪಟ್ಟಿ ಕರೆದು ಖರೀದಿಸಲು ಅನುಮೋದನೆ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಕೋರಿರುವಂತೆ, 2012–13ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರ ಕಛೇರಿಯ ಸಭಾಂಗಣಕ್ಕೆ ಅವಶ್ಯವಿರುವ 5ಕೆ.ವಿ.ಯು.ಪಿ.ಎಸ್ ಅನ್ನು ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ ಲೆಕ್ಕಶೀರ್ಷಿಕೆ 2210–00–106–0–01 ವೇತನೇತರ ಬಾಬ್ತಿನಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಆಸ್ಪತ್ರೆಗಳಲ್ಲಿ ಇರುವ ಆಟೋಕ್ಲೇವ್, ಸ್ಟೆರಿಲೈಜರ್, ಮೈಕ್ರೋಸ್ಕೋಪ್, ಓ.ಟಿ.ಲೈಟ್, ಕ್ಷ–ಕಿರಣ ಯಂತ್ರ ಹಾಗೂ ಇತರೆ ಆಸ್ಪತ್ರೆಯ ವೈದ್ಯಕೀಯ ಸಲಕರಣೆಗಳು ಕೆಟ್ಟು ಹೋದಾಗ ಈ ಕಛೇರಿಯ ಉಪಕರಣದ ತ್ರಂತ್ರಜ್ಞರು ಅಧೀನ ಆಸ್ಪತ್ರೆಗೆ ಹೋಗಿ ದುರಸ್ಥಿಪಡಿಸಲು ಬೇಕಾಗುವ ಬಿಡಿ |

ದೃಷ್ಟಿಯಿಂದ ಅವರನ್ನು ಹಾಸನ ನಗರದಲ್ಲಿರುವ ಶಾಲೆಗೆ ನಿಯೋಜನೆ ಮಾಡಲು ಕ್ರಮ ವಹಿಸಬೇಕೆಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ, ಆಲೂರು ತಾಲ್ಲೂಕುರವರು ಮಾತನಾಡುತ್ತಾ, ಆಲೂರು ತಾಲ್ಲೂಕು ಕಲ್ಲಾರೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಕಟ್ಟಡ ನಿರ್ಮಾಣದ ಜಾಗದಲ್ಲಿ ಹೈಪವರ್ ಟೆನ್ಷನ್ ವೈರ್ ಹಾದುಹೋಗಿದ್ದು, ಕಟ್ಟಡ ನಿರ್ಮಾಣಕ್ಕೆ ತೊಂದರೆಯಗಿರುತ್ತದೆ. ವೈರನ್ನು ಸ್ಥಳಾಂತರ ಮಾಡುವ ಬಗ್ಗೆ ಚೆಸ್ಕಾಂ ಅಧಿಕಾರಿಗಳಿಗೆ ಪತ್ರ ಬರೆಯಲಾಗಿ ಅವರು ರೂ.1.60ಲಕ್ಷಗಳನ್ನು ಠೇವಣಿ ಕಟ್ಟಿದಲ್ಲಿ ಸ್ಥಳಾಂತರ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.

ಈ ಬಗ್ಗೆ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ಮಾನ್ಯ ಸದಸ್ಯರಾದ ಶ್ರೀಮತಿ ಹೆಚ್.ಬಿ.ಮಂಜಮ್ಮರವರು ಮಾತನಾಡುತ್ತಾ, ಸಕಲೇಶಪುರ ತಾಲ್ಲೂಕಿನಲ್ಲಿ ಪ್ರೌಢಶಾಲೆಗಳಲ್ಲಿ ಗಣಿತ ಮತ್ತು ವಿಜ್ಞಾನ ಶಿಕ್ಷಕರ ಕೊರತೆ ಹೆಚ್ಚಾಗಿದ್ದು, ಶಿಕ್ಷಕರನ್ನು ನೇಮಕ ಮಾಡಲು ಕ್ರಮ ವಹಿಸಬೇಕೆಂದು ಕೋರಿದರು.

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಮಾತನಾಡುತ್ತಾ, ಆಯುಕ್ತರ ಕಛೇರಿಯಿಂದ ನೀಡಿರುವ ವೇಳಾಪಟ್ಟಿಯಂತೆ ಶಿಕ್ಷಕರ ಕೌನ್ಸಿಲಿಂಗ್ ಮಾಡಬೇಕಾಗಿದ್ದು, ಅದರಂತೆ ಕ್ರಮ ವಹಿಸಲಾಗುವುದು ಎಂದು ವಿವರ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ, ಹಾಸನ ಇವರು ಮಾತನಾಡುತ್ತಾ, ಹಾಸನ ತಾಲ್ಲೂಕಿನಲ್ಲಿ 42 ಶಿಕ್ಷಕರು ಹೆಚ್ಚುವರಿಯಾಗಿದ್ದಾರೆಂದು ಸಭೆಗೆ ವಿವರ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ, ಅರಕಲಗೂಡು ಇವರು ಮಾತನಾಡುತ್ತಾ, ತಾಲ್ಲೂಕಿನಲ್ಲಿ 43 ಶಿಕ್ಷಕರ ಕೊರತೆಯಿದೆ. ಬಹಳ ಹಿಂದೆ ನಿರ್ಮಾಣ ಮಾಡಿರುವ ಶಾಲಾ ಕಟ್ಟಡಗಳು ಬೀಳುವ ಸ್ಥಿತಿಯಲ್ಲಿವೆ ಮತ್ತು ಅರಕಲಗೂಡು ಪಟ್ಟಣದಲ್ಲಿರುವ ಪುಸ್ತಕಗಳನ್ನು ಸಂಗ್ರಹಿಸಿಡುವ ಕಟ್ಟಡವು ತುಂಬಾ ಶಿಥಿಲಗೊಂಡಿದ್ದು, ಮಳೆಬಂದರೆ ಪುಸ್ತಕಗಳೆಲ್ಲವು ಹಾಳಾಗುತ್ತವೆ. ಆದ್ದರಿಂದ, ಸದರಿ ಕಟ್ಟಡಕ್ಕೆ ಆರ್.ಸಿ.ಸಿ ಹಾಕಿಸಲು ಅನುದಾನವನ್ನು ನೀಡಬೇಕೆಂದು ಕೋರಿದರು.

ಸಕಲೇಶಪುರ ತಾಲ್ಲೂಕಿನಲ್ಲಿ 56 ಶಿಕ್ಷಕರ ಕೊರತೆಯಿರುವುದಾಗಿ ಕ್ಷೇತ್ರ ಶಿಕ್ಷಣಾಧಿಕಾರಿಯವರು ವಿವರ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ, ಆಲೂರು ಇವರು ಮಾತನಾಡುತ್ತಾ, ಆಲೂರು ತಾಲ್ಲೂಕು ಬಿರಡಹಳ್ಳಿ ಗ್ರಾಮದಲ್ಲಿ ಶಾಲಾ ಕಟ್ಟಡವನ್ನು ನಿರ್ಮಿಸಲು ಅರಣ್ಯ ಇಲಾಖೆಯಿಂದ 5 ಎಕರೆ ಜಮೀನನ್ನು ನೀಡಿರುತ್ತಾರೆ. ಮತ್ತು ತಾಲ್ಲೂಕಿನಲ್ಲಿ 20 ಶಿಕ್ಷಕರು ಹೆಚ್ಚುವರಿಯಾಗಿದ್ದಾರೆಂದು ವಿವರ ನೀಡಿದರು.

ನಬಾರ್ಡ್ ವತಿಯಿಂದ ಆರ್.ಐ.ಡಿ.ಎಫ್–13ರಡಿಯಲ್ಲಿ ಅನುಷ್ಠಾನ ಮಾಡಿರುವ ಕಾಮಗಾರಿಗಳನ್ನು ಸಂಪೂರ್ಣವಾಗಿ ಇಲಾಖೆಯ ವಶಕ್ಕೆ ನೀಡಿರುವುದಿಲ್ಲವೆಂದು ಶಿಕ್ಷಣ ಇಲಾಖೆಯ ವಿಷಯ ನಿರ್ವಾಹಕರು ಸಭೆಯ ಗಮನಕ್ಕೆ ತಂದರು.

ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡುತ್ತಾ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಂದ ಅರೆ ಸರ್ಕಾರಿ ಪತ್ರವನ್ನು ಕಾರ್ಯಪಾಲಕ ಅಭಿಯಂತರರು, ಹಾಸನ ವಿಭಾಗರವರಿಗೆ ಕಳುಹಿಸಿ ಕಟ್ಟಡಗಳನ್ನು ಇಲಾಖೆಯ ವಶಕ್ಕೆ ಪಡೆಯುವ ಬಗ್ಗೆ ಕ್ರಮ ವಹಿಸಬೇಕೆಂದು ತಿಳಿಸಿದರು.

ಮುಂದುವರೆದು, ಆರ್.ಐ.ಡಿ.ಎಫ್ ಯೋಜನೆಯಡಿ ಅನುಷ್ಠಾನ ಮಾಡುವ ಕಟ್ಟಡ ಕಾಮಗಾರಿಗಳಿಗೆ ಘಟಕ ವೆಚ್ಚಕ್ಕಿಂತ ಹೆಚ್ಚು ಖರ್ಚು ಮಾಡಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಹೆಚ್.ಬಿ.ಮಂಜಮ್ಮರವರು ಮಾತನಾಡುತ್ತಾ, ಸಕಲೇಶಪುರ ತಾಲ್ಲೂಕು ಮಾರನಹಳ್ಳಿ ಗ್ರಾಮದಲ್ಲಿ ಶಾಲಾ ಕಟ್ಟಡವನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ನೀಡಿದಲ್ಲಿ ಕಟ್ಟಡ ನಿರ್ಮಾಣ ಮಾಡುವುದಾಗಿ ತಿಳಿಸಿದ್ದು, ಸಮಿತಿಗೆ ಕಟ್ಟಡವನ್ನು ವರ್ಗಾವಣೆ ಮಾಡಬೇಕೆಂದು ಕೋರಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಕಲೇಶಪುರ ರವರು ಮಾತನಾಡುತ್ತಾ, ಹೊಂಗಡಹಳ್ಳ ಮತ್ತು ಹೆತ್ತೂರು ಗ್ರಾಮಗಳಿಗೆ ಮಂಜೂರಾದ ಶಾಲಾ ಕಟ್ಟಡಗಳನ್ನೂ ಸಹ ನಿರ್ಮಾಣ ಮಾಡಿರುವುದಿಲ್ಲ. ಸಕಲೇಶಪುರ ಟೌನ್‌ನಲ್ಲಿ ಮಂಜೂರಾಗಿರುವ ಕಟ್ಟಡಕ್ಕೆ ಸ್ಥಳದ ಸಮಸ್ಯೆಯಿದ್ದು, ಹೆತ್ತೂರು ಮತ್ತು ಹೊಂಗಡಹಳ್ಳ ಗ್ರಾಮಗಳಲ್ಲಿ ಸ್ಥಳದ ಸಮಸ್ಯೆಯಿರುವುದಿಲ್ಲವೆಂದು ಸಭೆಗೆ ವಿವರ ನೀಡಿದರು.

ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡುತ್ತಾ, ಸಹಾಯಕ ಕಾರ್ಯಪಾಲಕ ಅಭಿಯಂತರರು ಶಾಲಾ ಕಟ್ಟಡ ನಿರ್ಮಾಣಕ್ಕೆ ಸ್ಥಳದ ಸಮಸ್ಯೆಯಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಶಾಲಾ ಕಟ್ಟಡಗಳು ಮಂಜೂರಾಗಿರುವ ಗ್ರಾಮಗಳಿಗೆ ತೆರಳಿ ಪರಿಶೀಲಿಸಿ ಒಂದು ವಾರದ ಒಳಗಾಗಿ ವರದಿಯನ್ನು ನೀಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಕಲೇಶಪುರ ಉಪ ವಿಭಾಗರವರಿಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಅರಕಲಗೂಡು ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸುತ್ತಿರುವ ಶ್ರೀಮತಿ ಚಂದ್ರಕಲ, ಹಿಂದಿ ಶಿಕ್ಷಕರಿಗೆ ಆರೋಗ್ಯ ಇಲಾಖೆಯಿಂದ ನೀಡಿದ ಚಿಕಿತ್ಸೆಯಿಂದ ಅವರ ಬಲಗೈಗೆ ತುಂಬಾ ತೊಂದರೆಯಾಗಿರುವುದರಿಂದ, ಮಾನವೀಯತೆ

ಮಾಡುತ್ತಾರೆ. ಆದ್ದರಿಂದ, ಪ್ರಸಕ್ತ ಸಾಲಿನಲ್ಲಿ ಮಾದರಿಯಲ್ಲಿ ಯಾವ ಪೀಠೋಪಕರಣಗಳನ್ನು ತೋರಿಸುತ್ತಾರೋ ಅದೇ ಗುಣಮಟ್ಟದ ಪೀಠೋಪಕರಣಗಳನ್ನು ಶಾಲೆಗಳಿಗೆ ಸರಬರಾಜು ಮಾಡಲು ಟೆಂಡರ್‌ದಾರರಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಬೇಕೆಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ತಿಳಿಸಿದರು.

ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡುತ್ತಾ, ಸಾಧನ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ, ಸರ್ಕಾರದಿಂದ ಬಿಡುಗಡೆಯಾಗಿರುವ 3ಕಂತಿನ ಅನುದಾನವನ್ನು ಶಿಕ್ಷಣ ಇಲಾಖೆಗೆ ಬಿಡುಗಡೆ ಮಾಡಲಾಗಿರುತ್ತದೆ. ಟೆಂಡರ್ ಕರೆದು ಡಿಸೆಂಬರ್ ಅಂತ್ಯದೊಳಗೆ ಕಾರ್ಯಾದೇಶವನ್ನು ನೀಡಿ ಶಾಲೆಗಳಿಗೆ ಸಮರ್ಪಕವಾಗಿ ಸಾಮಗ್ರಿಗಳು ಸರಬರಾಜಾಗಿವೆಯೇ? ಎಂಬ ಬಗ್ಗೆ ದೃಢೀಕರಿಸಿಕೊಂಡು 4ನೇ ಕಂತಿನ ಅನುದಾನ ಸರ್ಕಾರದಿಂದ ಬಿಡುಗಡೆಯಾದ ತಕ್ಷಣವೇ ಟೆಂಡರ್‌ದಾರರಿಗೆ ಹಣವನ್ನು ಪಾವತಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು.

ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡುತ್ತಾ, ಸೇರ್ಪಡೆ ಮಾರ್ಪಾಡು ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಶಾಲೆಗಳ ದುರಸ್ಥಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರನ್ನು ಸಂಪರ್ಕಿಸಿ ಯಾವ ದುರಸ್ಥಿ ಆಗಬೇಕಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಪಡೆದು ಅದರಂತೆ ಅಂದಾಜುಪಟ್ಟಿಯನ್ನು ಸಿದ್ದಪಡಿಸಿ ಕ್ರಮ ವಹಿಸುವಂತೆ ಕಾರ್ಯಪಾಲಕ ಅಭಿಯಂತರರು ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ನಿರ್ದೇಶನ ನೀಡಬೇಕೆಂದು ತಿಳಿಸಿದರು ಮತ್ತು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರೂ ಸಹ ಈ ಬಗ್ಗೆ ಸಹಕರಿಸಿ ಶಾಲೆಗಳ ದುರಸ್ಥಿಯನ್ನು ಸಮರ್ಪಕವಾಗಿ ಮಾಡಲು ಕ್ರಮ ವಹಿಸಬೇಕೆಂದು ತಿಳಿಸಿದರು.

ನಬಾರ್ಡ್ ಯೋಜನೆಯಡಿ ಅನುಷ್ಠಾನ ಮಾಡಿರುವ ಶಾಲಾ ಕೊಠಡಿಗಳ ಕಾಮಗಾರಿಗೆ ಸಂಬಂಧಿಸಿದಂತೆ, ಪ್ರಗತಿ ವರದಿಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿಯಿಂದ ಪಡೆದುಕೊಳ್ಳಬೇಕೆಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ತಿಳಿಸಿದರು ಮತ್ತು ಪೂರ್ಣಗೊಂಡಿರುವ ಕಾಮಗಾರಿಗಳನ್ನು ಇಲಾಖೆಯ ವಶಕ್ಕೆ ನೀಡಲು ಸೂಚಿಸಲಾಯಿತು.

**ದಿನಾಂಕ: 20-11-2012ರಂದು ಪೂರ್ವಾಹ್ನ: 11-00 ಗಂಟೆಗೆ ಹೇಮಾವತಿ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

**ಅಧ್ಯಕ್ಷತೆ: ಶ್ರೀ ಸ್ವಾಮಿಗೌಡ,**

**ಅಧ್ಯಕ್ಷರು,**

**ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ.**

ಹಾಜರಿ: 07 ಗೈರು ಹಾಜರಿ: 00

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಉಪಕಾರ್ಯದರ್ಶಿ(ಆಡಳಿತ)ರವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ನಡೆಸಿ ಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು. | |
| 1 | ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಶಾಲೆಗಳಿಗೆ ಸಾಧನ ಸಾಮಗ್ರಿ ನೀಡಲು ಶಾಲೆಗಳ ಆಯ್ಕೆ ಹಾಗೂ ಖರೀದಿಸಲು ಟೆಂಡರ್ ಪ್ರಕ್ರಿಯೆ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಕಾ/ಅಭಿ(8) ಔಷಧ.10/2012-13 ದಿನಾಂಕ: 09-11-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರು 2012-13ನೇ ಸಾಲಿಗೆ ಸರ್ಕಾರಿ ಪ್ರೌಢಶಾಲೆಗಳಿಗೆ ಸಾಧನ ಸಾಮಗ್ರಿ ನೀಡಲು ಶಾಲೆಗಳ ಆಯ್ಕೆ ಹಾಗೂ ಖರೀದಿಸಲು ಟೆಂಡರ್ ಪ್ರಕ್ರಿಯೆಗೆ ಅನುಮೋದನೆ ನೀಡುವಂತೆ ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಶಿವಶಂಕರ್ (ಕುಂಟೆ)ರವರು ಮಾತನಾಡುತ್ತಾ, 2011-12ನೇ ಸಾಲಿನಲ್ಲಿ ತಮ್ಮ ಕ್ಷೇತ್ರದ ಯಾವುದೇ ಶಾಲೆಗೆ ಸಾಧನ ಸಾಮಗ್ರಿಗಳನ್ನು ನೀಡಿರುವುದು ಕಂಡುಬಂದಿರುವುದಿಲ್ಲ. ಈ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿದರು.<br>ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡುತ್ತಾ, ಕ್ಷೇತ್ರ ಶಿಕ್ಷಣಾಧಿಕಾರಿಯವರು ಮಾನ್ಯ ಸದಸ್ಯರ ಕ್ಷೇತ್ರ ವ್ಯಾಪ್ತಿಯ ಶಾಲೆಗೆ ಪೀಠೋಪಕರಣಗಳನ್ನು ಸರಬರಾಜು ಮಾಡಿರುವ ಬಗ್ಗೆ ವಿವರವನ್ನು ನೀಡುವಂತೆ ತಿಳಿಸಿದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಸಾಧನ ಸಾಮಗ್ರಿಗಳ ಸರಬರಾಜಿನಲ್ಲಿ ಟೆಂಡರ್‌ದಾರರು ಮಾದರಿಯಲ್ಲಿ ಉತ್ತಮ ಗುಣಮಟ್ಟದ ಪೀಠೋಪಕರಣಗಳನ್ನು ತೋರಿಸುತ್ತಾರೆ. ಆದರೆ, ಶಾಲೆಗಳಿಗೆ ಸರಬರಾಜು ಮಾಡುವಾಗ ಕಳಪೆ ಗುಣಮಟ್ಟದ ಪೀಠೋಪಕರಣಗಳನ್ನು ಸರಬರಾಜು | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಸಕಲೇಶಪುರ ತಾಲ್ಲೂಕು ಮಾರನಹಳ್ಳಿ ಗ್ರಾಮದಲ್ಲಿ ಪ್ರೌಢಶಾಲಾ ಕಟ್ಟಡವನ್ನು ನಿರ್ಮಿಸಲು ಅನುದಾನವನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಮಾರನಹಳ್ಳಿ ಇವರಿಗೆ ಬಿಡುಗಡೆ ಮಾಡುವಂತೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರಿಗೆ ತಿಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.<br>ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಕೋರಿರುವಂತೆ 2012-13ನೇ ಸಾಲಿಗೆ ಸಾಧನ ಸಾಮಗ್ರಿಗಳ ಖರೀದಿ ಲೆಕ್ಕಶೀರ್ಷಿಕೆ 2202-00-101-0-35-221 ರಡಿಯಲ್ಲಿ ನಿಗದಿಯಾಗಿರುವ ರೂ.16.00ಲಕ್ಷ (ರೂಪಾಯಿ ಹದಿನಾರು ಲಕ್ಷ ಮಾತ್ರ)ಗಳಲ್ಲಿ ಪ್ರೌಢಶಾಲೆಗಳಿಗೆ ಅಲ್ಮೆರಾ ಮತ್ತು ಡೆಸ್ಕ್‌ಗಳನ್ನು ಟೆಂಡರ್ ಕರೆದು ನಿಯಮಾನುಸಾರ ಖರೀದಿಸಲು ಅನುಮತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

7. ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಶಾಲೆಗಳಿಗೆ ಸಾಧನ ಸಾಮಗ್ರಿ ನೀಡಲು ಶಾಲೆಗಳ ಆಯ್ಕೆ ಹಾಗೂ ಖರೀದಿಸಲು ಟೆಂಡರ್ ಪ್ರಕ್ರಿಯೆ ಬಗ್ಗೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ವಿಷಯಗಳು**

ಪ್ರತಿಯನ್ನು:

1. ಶ್ರೀ ಸ್ವಾಮಿಗೌಡ, ಅಧ್ಯಕ್ಷರು ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
2. ಶ್ರೀಮತಿ ಎಂ.ವಿ. ಹೇಮಾವತಿ ಮಂಜುನಾಥ್, ಸದಸ್ಯರು, ಶಿಕ್ಷಣ ಆರೋಗ್ಯ ಮತ್ತು ಸ್ಥಾಯಿ ಸಮಿತಿ
3. ಶ್ರೀ ಅಮಿತ್ ಕುಮಾರ್ ಶೆಟ್ಟಿ, ಸದಸ್ಯರು, ಶಿಕ್ಷಣ ಆರೋಗ್ಯ ಮತ್ತು ಸ್ಥಾಯಿ ಸಮಿತಿ
4. ಶ್ರೀಮತಿ ದೇವಿಕ, ಸದಸ್ಯರು, ಶಿಕ್ಷಣ ಆರೋಗ್ಯ ಮತ್ತು ಸ್ಥಾಯಿ ಸಮಿತಿ
5. ಶ್ರೀಮತಿ ಹೆಚ್.ಬಿ. ಮಂಜಮ್ಮ , ಸದಸ್ಯರು, ಶಿಕ್ಷಣ ಆರೋಗ್ಯ ಮತ್ತು ಸ್ಥಾಯಿ ಸಮಿತಿ
6. ಶ್ರೀ ಶಿವಶಂಕರ (ಕುಂಟೆ), ಸದಸ್ಯರು, ಶಿಕ್ಷಣ ಆರೋಗ್ಯ ಮತ್ತು ಸ್ಥಾಯಿ ಸಮಿತಿ
7. ಶ್ರೀಮತಿ ಶಾಂತಮ್ಮ, ಸದಸ್ಯರು, ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ.
8. ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ ಮಾಹಿತಿಗಾಗಿ
9. ಜಿಲ್ಲಾ ಪಂಚಾಯಿತಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಹಿತಿಗಾಗಿ
10. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ
11. ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯಿತಿ, ಹಾಸನ.
12. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
13. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
14. ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
15. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ.
16. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಹಾಸನ.
17. ಜಿಲ್ಲಾ ವೈದ್ಯಾಧಿಕಾರಿ, ಆಯುಷ್ ಇಲಾಖೆ, ಹಾಸನ.
18. ಸಹಾಯಕ ನಿರ್ದೇಶಕರು, ಜಿಲ್ಲಾ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಹಾಸನ.
19. ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾಹಿತಿಗಾಗಿ
20. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
21. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು 22. ಕಛೇರಿ ಪ್ರತಿ.

# ಜಿಲ್ಲಾ ಪಂಚಾಯಿತಿ, ಹಾಸನ.

ಸಂಖ್ಯೆ: ಜಿ.ಪಂ.ಹಾ/ಅಭಿ(8)/ 19 /2012-13

ದಿನಾಂಕ: 08-11-2012

## ಸಭಾಹ್ವಾನ ಪತ್ರ

ಶ್ರೀ ಸ್ವಾಮಿಗೌಡರು, ಮಾನ್ಯ ಅಧ್ಯಕ್ಷರು, ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 20-11-2012ರಂದು ಮಂಗಳವಾರ ಬೆಳಿಗ್ಗೆ: 11-00 ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯನ್ನು ಕರೆಯಲಾಗಿದೆ. ಸದರಿ ಸಭೆಗೆ ಸದಸ್ಯರುಗಳು ಸಕಾಲಕ್ಕೆ ಹಾಜರಾಗಬೇಕೆಂದು ಕೋರಿದೆ.

ಉಪ ಕಾರ್ಯದರ್ಶಿ(ಅಭಿವೃದ್ಧಿ),
ಹಾಗೂ ಸದಸ್ಯ ಕಾರ್ಯದರ್ಶಿ,
ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ.

ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:

1. ಆಯುಷ್ ಇಲಾಖೆಯ ಅಧೀನದ ಆಯುರ್ವೇದ ಮತ್ತು ಯುನಾನಿ ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳಿಗೆ 2012-13ನೇ ಸಾಲಿನಲ್ಲಿ ಸರಬರಾಜು ಆಗುವ ಬಿಲ್ಲುಗಳನ್ನು ಅನುಮೋದಿಸುವ ಬಗ್ಗೆ.
2. 2012-13ನೇ ಸಾಲಿಗೆ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾಸನ ಇಲ್ಲಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಕೊಟೇಷನ್ ಮೂಲಕ ಖರೀದಿಸುವ ಬಗ್ಗೆ.
3. 2012-13ನೇ ಸಾಲಿಗೆ ಆಯುಷ್ ಆಸ್ಪತ್ರೆಗಳಿಗೆ ಅವಶ್ಯವಿರುವ ಆಸ್ಪತ್ರೆ ಪರಿಕರಗಳನ್ನು ಖರೀದಿಸುವ ಬಗ್ಗೆ.
4. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ.
5. ಜಿಲ್ಲಾ ಯುವ ಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ.
6. ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಸಾಕ್ಷರತಾ ಸಮಿತಿಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ.